## ಕಲ್ಪನೆ ಕಾವ್ಯ



# ಸಂತನ ಪಯಣ

ಸಾಧು ಸಂತರ ಬಂಟ
ಆಧ್ಯಾತ್ಮವ ಅರಸಿ ನಿಂತ
ಸಾಗುವ ಹಾದಿಯೋ ಕಾಡುಗುಡ್ಡ
ಅಲ್ಲಲ್ಲಿ ಅಡ್ಡಡ್ಡ ಇಳಿಜಾರು ದಿಬ್ಬ

ಚಳಿ, ಗಾಳಿ ,
ಮಳೆ , ಬಿಸಿಲು ಲೆಕ್ಕಕ್ಕಿಲ್ಲ
ಕಾಲ್ನಡಿಗೆಯಲಿ ಪಯಣ
ಅವಶ್ಯಕತೆಗಳಷ್ಟೇ ಸಂಗಡ
ನೀರಡಿಕೆ, ಸ್ನಾನಕ್ಕೇ, ಹಳ್ಳಕೊಳ್ಳ

ಬಯಸಿ ಬೇಡಿ ಕಾವಿವೇಷ
ಪರಮಾತ್ಮನಲ್ಲಿ ಪರಮಾರ್ಥ
ಕಾಣುವ ಕಾಯಕ
ಭಕ್ತಿಯ ಸಾರ

ಪ್ರತೀ ಹೆಜ್ಜೆಯೂ
ಮೌನ ಧ್ಯಾನ
ಜನುಮವೂ
ಆಗಲೀ ಪಾವನ

ಎಂದು, ಸವೆಸುತಿದೆ ದೂರ
ನೆನೆಯುತ ದೇವರನಾಮ

**-ಸವಿತಾ ಕುಲಕರ್ಣಿ, ಹುಬ್ಬಳ್ಳಿ**

# ‘ಭಾರ’ ಇಳಿಸಬೇಕಿದೆ

ನಾನು ನಿಂತ ಬೆಟ್ಟವಲ್ಲ
ನಡೆವ ಜಂಗಮ
ಕಣಿವೆ ಕೊಳ್ಳದ ಹರಿವ ನದಿಯಂತೆ
ನನ್ನ ಇರವು

ದಿನ ವಾರ ಯಾವ ಲೆಕ್ಕ?
ಬಂದ ದಾರಿ, ಹೊರಟ ಹಾದಿಯೂ ಒಂದೇ
ಎಲ್ಲೊ ಬಯಲು ರಾತ್ರಿ
ಕಳೆದು ಹೊರಡುವದು ಕಾಯ
ನಡೆವುದೇ ಕಾರ್ಯ

ಹೆಗಲ ಜೋಳಿಗೆ, ಬೆನ್ನ ಮೇಲಿನ ಗಂಟು
ಜನ್ಮಾಂತರಗಳ ನಂಟು
ಹೊತ್ತು ಚಲಿಸಬೇಕಿದೆ
ದಾರಿ ಅಗಮ್ಯ, ಅಗೋಚರ
ಹಿಮಾಚ್ಛಾದಿತ.

‘ಭಾರ’ ಇಳಿಸಬೇಕಿದೆ.

**-ಶಿವಕುಮಾರ ಕಟ್ಟೀಮನಿ, ಘಟಪ್ರಭಾ**